ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 20-06-2024 ರಂದು ಬೋಧಿಸಲಾಯಿತು.

(ಸಾಕ್ಷಿದಾರರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಹಿಂದಿ ಭಾಷೆ ಬಲ್ಲವರಾಗಿದ್ದು ಶ್ರೀ ಪಿ ಜಿ ಪಿ ವಕೀಲರು ಸಾಕ್ಷಿ ಹಿಂದಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳುವುದಾಗಿ ಪ್ರಮಾಣ ವಚನ ಸ್ವೀಕರಿಸಿ ಸಾಕ್ಷಿ ಹಿಂದಿಯಲ್ಲಿ ಹೇಳಿದ ಸಾಕ್ಷ್ಯವನ್ನು ಸದ್ರಿಯವರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ್ ಮಾಡಿಕೊಳ್ಳಲಾಯಿತು)

ಪಾಟೀ ಸವಾಲುಃ ಶ್ರೀ ಸಿ ಡಿ ಎನ್ ನ್ಯಾಯವಾದಿರವರಿಂದಃ

ನನಗೆ ಕನ್ನಡ ಓದಲು ಬರೆಯಲು ಸರಿಯಾಗಿ ಬರುವುದಿಲ್ಲ. ನಾನು ವಾದ ಪತ್ರವನ್ನು ನನ್ನ ವಕೀಲರ ಮೂಲಕ ಓದಿ ತಿಳಿದುಕೊಂಡಿರುತ್ತೇನೆ. ನಾನು ಸೈನಿಕನಾಗಿ ಸೇವೆ ಮಾಡುತ್ತಿದ್ದರಿಂದ ಕಾರವಾರದಿಂದ ಹೊರಗಡೆ ಸಾಕಷ್ಟು ವರ್ಷ ಇದ್ದೆನು ಎಂದರೆ ಸರಿ. ದಾವಾಸ್ತಿಯ ಮೂಲ ಸರ್ವೆ ನಂ. 175 ಇದ್ದು, ಅದರಲ್ಲಿ ತುಂಬಾ ಹಿಸ್ಸೆದಾರರು ಇದ್ದು, ನಂತರ ಹಿಸ್ಸೆದಾರರುಗಳು ಸ್ವಾಧೀನಕ್ಕೆ ಅನುಗುಣವಾಗಿ ಬೇರೇ ಬೇರೆ ಹಿಸ್ಸೆಗಳಾಗಿರುತ್ತವೆ ಎಂದರೆ ಸರಿ. ಸರ್ವೆ ನಂ .175/13 ಡಿ ಮತ್ತು 175/13 ಎ ಮೂಲತಃ ಒಂದೇ ಸರ್ವೆ ನಂಬರಗೆ ಸೇರಿದ್ದು , ಅದು ವಿಭಜನೆ ಆಗಿದ್ದಿರಲಿಲ್ಲ ಎಂದರೆ ಸರಿ. ಸದರಿ 2 ಸರ್ವೆ ನಂಬರಗಳನ್ನು ಹಿಸ್ಸೆ ಮಾಡುವಂತೆ ಯಾರು ಅರ್ಜಿಯನ್ನು ನೀಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನನ್ನ ತಾಯಿ ಜೀವಂತ ಇರುವ ಸಮಯದಲ್ಲಿ ಪ್ರತ್ಯೇಕ ಆಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿ.ಪಿ-1 ವಾಂಟಣಿ ಪತ್ರ 2014 ರಲ್ಲಿ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಅದು ನಮ್ಮ ಕುಟುಂಬದ ಆಸ್ತಿಗೆ ಸಂಬಂದಪಟ್ಟ ವಾಂಟಣಿ ಆಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ನಿ.ಪಿ-1 ವಾಂಟಣಿ ಪತ್ರ ಮಾಡುವ ಕಾಲಕ್ಕೆ 11 ಇ ನಕಾಶೆಯನ್ನು ತಯಾರಿಸುವ ಕಾಲಕ್ಕೆ 2 ನೇ ಪ್ರತಿವಾದಿಗೆ ನೋಟೀಸ ಜಾರಿ ಮಾಡಿರುವುದಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು, ಸದರಿ ಆಸ್ತಿ ನನ್ನ ಅಣ್ಣನ ಹೆಸರಿನಲ್ಲಿ ಇದ್ದ ಆಸ್ತಿಯಾಗಿದ್ದು ಅದು ದಾವೆಗೆ ಸಂಬಂದಪಟ್ಟ ಆಸ್ತಿ ಆಗಿರುವುದಿಲ್ಲ ಬದಲಾಗಿ ಶಿರವಾಡ ಗ್ರಾಮದ ಆಸ್ತಿ ಆಗಿರುತ್ತದೆ ಎಂದು ಸಾಕ್ಷ್ಯನುಡಿಯುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ನ್ಯಾಯಾವಾದಿರವರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**